ಶಿವಮೊಗ್ಗ ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 29ನೆ ಆಗಸ್ಟ್ 1907ನೆ ಇಸವಿ.

1907ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 19ನೆ ಮುಕ್ಕಂ 38ನೆ ನಂಬರ್ ಮೈಸೂರು ಗೆಜೆಟ್ 2ನೆ ಭಾಗದ 461—462—463ನೆ ನಂಬರ್ ಪುಟಗಳಲ್ಲಿ ಪ್ರಾಯಿಷ್ ಆಗಿರುವ ಇಸ್ತಿಹಾರ್‌ನಾಮೆಯಲ್ಲಿ ನಮೂದಿರುವ ಶಿವಮೊಗ್ಗ ಡಿಸ್ಟ್ರಿಕ್ಟ್ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ಜೀವಾರಸಾಗಿ ನಿಂತಿರುವ ದಸ್ತಾವೇಜುಗಳನ್ನು ಇಸ್ತಿಹಾರ್‌ನಾಮೆಯು ಗೆಜೆಟಿನಲ್ಲಿ ಪ್ರಾಯಿಷ್ ಆದಲಾಗಾಯಿತು ಒಂದು ತಿಂಗಳು ಅವಧಿಯೊಳಗೆ ವಾಪಸು ಪಡಿಯದಿದ್ದಲ್ಲಿ ನಾಶಪಡಿಸಿಬಿಡುತ್ತಾದ ಸಂಗತಿ ಈ ಮೂಲಕ ತಿಳಿಸಿರುತ್ತೆ.

ಎಂ. ನಾರಾಯಣರಾವ್,
ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ಬೆಂಗಳೂರು ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ೧೯೦೭—೦೮ನೆ ಇಸವಿ ಮಿ॥ ಅರ್ಜಿ ನಂಬರು 203.

ಬೆಂಗಳೂರಲ್ಲಿದ್ದು ಮೃತಪಟ್ಟ ಜೀವಿಕೋಟೆ ಸುಬ್ಬಣ್ಣ ಮತ್ತು ಕಾವೇರಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಚಾಮರಾಜಪೇಟೆಲಿರುವ ಜೀವಿಕೋಟೆ ನಂಜುಂಡಪ್ಪನ ಮಗ ಅಚ್ಚುತರಾವ್, ಮೃತಪಟ್ಟ ಸದರೀ ಸುಬ್ಬಣ್ಣ ವಗೈರೇರಿಗೆ ಖಾಸಾ ತಮ್ಮನ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಸುಬ್ಬಣ್ಣ, ಕಾವೇರಮ್ಮನವರ ಜಿಂದಗಿ ಖುಗ್ಯಾಗಿ ಬರತಕ್ಕ ರೂಪಾಯಿ 180—10—9 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇರ್ಷ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ಅಚ್ಚುತರಾಯರ ಅರ್ಜಿಯನ್ನು ಸ್ ೧೯೦೭ನೆ ಇಸವಿ ಅಕ್ಟೋಬರು ತಿಂಗಳು ತಾರೀಖು 4ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಣ್ಣ, ಕಾವೇರಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ. ಕಾವೇರಮ್ಮನೆಂಬುವರು ಸುಬ್ಬಣ್ಣನವರಿಗೆ ಖಾಸಾ ಹೆಂಡತಿ ಆಗಬೇಕು.

ಸ್ ೧೯೦೭ನೆ ಇಸವಿ ಸೆಪ್ಟಂಬರು ತಿಂಗಳು 6ನೆ ತಾರೀಖಿನಲ್ಲಿ ಕೋರ್ಟು ವೊಹರ್‌ನಿನ ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೭—೦೮ನೆ ಇಸವಿ ಮಿ॥ ಅರ್ಜೀ ನಂಬರ್ 212.

ಮಾಗಡೀಲಿ ಇದ್ದು ಮೃತಪಟ್ಟ ವೆಂಕಟಮ್ಮನೆಂಬುವಳ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ನಾರಾಯಣಶೆಟ್ಟ್ ಮೈನರ್, ಗಾರಡಿಯರ್ ಸುಂದರಮ್ಮ, ಮೃತಪಟ್ಟ ಸದರೀ ವೆಂಕಟಮ್ಮನಿಗೆ ಖಾಸಾ ತಾಯ್ ಆಗಬೇಕೆಂಬ ಹಕ್ಕುದಾರಿ ಮೇಲೆ ಮಾಗಡಿ ಸ್ಥಳದಲ್ಲಿ ವಾಸಸ್ಥರಾಗಿ ಮೃತಪಟ್ಟ ವೆಂಕಟಮ್ಮನ ಜಿಂದಗಿ ಬಗ್ಯಾಗಿ ಬರತಕ್ಕ 2,400 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇರ್ಷ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ನಾರಾಯಣಶೆಟ್ಟರ ಅರ್ಜಿಯನ್ನು ಸ್ ೧೯೦೭ನೆ ಇಸವಿ ಅಕ್ಟೋಬರ್ ತಿಂಗಳು ತಾರೀಖು 4ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಮ್ಮನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೭ನೆ ಇಸವಿ ಸೆಪ್ಟಂಬರ್ ತಿಂಗಳು 14ನೆ ತಾರೀಖಿನಲ್ಲಿ ಕೋರ್ಟು ವೊಹರ್‌ನಿನ ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೭—೦೮ನೆ ಇಸವಿ ಮಿ॥ ಅರ್ಜಿ ನಂಬರ್ 213.

ಮಾಗಡೀಲಿ ಇದ್ದು ಮೃತಪಟ್ಟ ಭಾಸ್ಕರಚಂದ್ರಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮಾಗಡಿಲಿರುವ ನಾರಾಯಣಶೆಟ್ಟ್ ಮೈನರ್, ಗಾರ್ಡಿಯರ್ ಸುಂದರಮ್ಮ, ಮೃತಪಟ್ಟ ಸದರೀ ಚಂದ್ರಶೆಟ್ಟರಿಗೆ ಖಾಸ ಗಂಡು ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮಾಗಡಿ ಸ್ಥಳದ ವಾಸಸ್ಥರಾಗಿ ಮೃತಪಟ್ಟ ಭಾಸ್ಕರಚಂದ್ರಶೆಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 9,300 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇರ್ಷ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತುದಾರರಾದ ನಾರಾಯಣಶೆಟ್ಟರ ಅರ್ಜಿಯನ್ನು ಸ್ ೧೯೦೭ನೆ ಇಸವಿ ಅಕ್ಟೋಬರ್ ತಿಂಗಳು ತಾರೀಖು 4ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಂದ್ರಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೭ನೆ ಇಸವಿ ಸೆಪ್ಟಂಬರ್ ತಿಂಗಳು 14ನೆ ತಾರೀಖಿನಲ್ಲಿ ಕೋರ್ಟು ವೊಹರ್‌ನಿನ ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.